
# ದಾರಿ



■ ಸಂತೆಬೆನ್ನೂರು ಫೈಜ್ನಟ್ರಾಜ್

ಕಲೆ: ರಘುಪತಿ ಶೃಂಗೇರಿ



ಒಡೆದ ಮೋಡಗಳು
ನಡೆಯುತಿವೆ
ಮೌನವಾಗಿ
ಎಲ್ಲೋ, ಹೇಗೋ ಸೇರಿ ಘಟ್ಟಿಸಲಿ
ಕೂಡಿ ಹನಿತರಾಯಿತು
ಒಂದಾಗೋ ಬೆಸುಗೆ
ಒಲವಾದರೆ ಆಗಲಿ...

ತನ್ನದೇ ಪದ್ಯ ತಾನೇ ಗುನುಗುನಿಸುತ್ತಾ ಸಮೀನಾ ಹಾಸಿಗೆಯಲ್ಲೇ ಅಂಗಾತವಾಗಿದ್ದಳು. ಏದುಸಿರುಬಿಡುತ್ತಾ ತಿರುಗುತ್ತಿದ್ದ ಬೂದು ಬಣ್ಣದ ಫ್ಯಾನನ್ನೇ ದಿಟ್ಟಿಸುತ್ತಿದ್ದಳು. ಅವಳ ರೂಮದು. ದಿಂಬಿನ ಮಗ್ಗುಲಲ್ಲೇ ಕೈಗೆ ಸಿಗುವಂತೆ ಸ್ವಿಚ್ಚುಗಳು. ಅದರ ಮೇಲ್ಭಾಗದಲ್ಲಿಯೇ ಅರೇಬಿಕ್ ಅಕ್ಷರಗಳಿರುವ ಬಂಗಾರದ ಕಟ್ಟು ಹಾಕಿರುವ ಬಣ್ಣದ ಫೋಟೊ. ಸೀಲಿಂಗ್ ಫ್ಯಾನಿನ ಆಜೂಬಾಜು ಆನ್‌ಲೈನಲ್ಲಿ ಅಕ್ಕ ತಮ್ಮ ಸೇರಿ ಬುಕ್ ಮಾಡಿ ತರಿಸಿದ ಹ್ಯಾಂಗಿಂಗ್ ಲೈಟಿನ ಜುಮ್ಮರ್‌ಗಳು ನೇತಾಡುತ್ತಿದ್ದವು. ಮೂಲೆಯಲ್ಲಿ ಅವಳ ಸ್ಟಡಿ ಟೇಬಲ್. ಇವಳತ್ತ ತಿರುಗಿರುವ ರೌಂಡ್ ಚೇರ್, ಟೇಬಲ್ ಮೇಲೆ ಒಪ್ಪವಾಗಿ ಜೋಡಿಸಿಟ್ಟಿದ್ದ ಪುಸ್ತಕಗಳು, ನೋಟ್ಸು, ಪ್ರಾಜೆಕ್ಟ್ ವರ್ಕಿನ ಫೈಲುಗಳು ಅವಳಂತೆಯೇ ಮಂಕಾಗಿ ಬಿದ್ದುಕೊಂಡಿದ್ದವು. ಹಳೆಯ ನೋಟ್ ಪ್ಯಾಡಿನಲ್ಲಿ ಎ ಫೋರ್ ಸೈಜಿನ ಅಪ್ಪಟ ಮೊಲದ ಬಣ್ಣದ ಹಾಳೆಗಳು ಕತ್ತಿಗೆ ಕ್ಲಿಪ್ಪನ್ನು ಅಮುಕಿ ಮೆಲ್ಲ ಉಸಿರಾಡುತ್ತಿದ್ದವು. ಒಂದೆರಡು ಹಾಳೆಗಳಲ್ಲಿ ಸಮೀನಾ ಬರೆದ ಕಾವ್ಯ ಸಾಲುಗಳು ಅರ್ಧಕ್ಕೆ ನಿಂತಿದ್ದವು. ಬೆಳಗಿನ ನಮಾಜು ರೂಮಿನಲ್ಲಿಯೇ ಮುಗಿಸಿ ಐದೂವರೆಯಿಂದ ಮತ್ತೆ ನಿದ್ರಿಸದೇ ಅಂಗಾತವಾಗಿ ಯೋಚಿಸುತ್ತಿದ್ದಳು. ಒಂದೆರಡು ಬಾರಿ ಸ್ಟೀಲ್ ಬಾಟಲಿಯಲ್ಲಿದ್ದ ನೀರು ಗುಟುಕರಿಸಿ